ಮಹಾವೀರ ಕಾಸರ, ಶಿವಮೊಗ್ಗ
ಮಂಗನ ಕೈಯಲ್ಲಿ ಸ್ಮಾರ್ಟ್‌ಫೋನ್ ಕೊಟ್ಟರೆ?



ಕೊಟ್ಟವನು ಮಂಗ ಎಂದು ಸಾಬೀತಾಗುತ್ತದೆ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಹಿಂದೆ ಗುರು–ಶಿಷ್ಯರು; ಈಗ ಟೀಚರ್ಸ್–ಸ್ಟೂಡೆಂಟ್ಸ್. ಮುಂದೆ?
ಏನ್ಗುರೂ–ಹಲೋ ಡೂಡ್!

ಬಿ. ಚಂದ್ರೇಗೌಡ, ಬೆಂಗಳೂರು
ರಾಮನ ಸಂಗಡ ಕಾಡಿಗೆ ಹೊರಟ ಲಕ್ಷ್ಮಣನಿಗೆ ಊರ್ಮಿಳೆಯ ನೆನಪಾಗಲಿಲ್ಲವೆ?
ನೆನಪಾಗಿದ್ದೇ ಹೊರಡಲು ಕಾರಣವಿದ್ದೀತು ಎಂದನೊಬ್ಬ ಮಾಡ್ರನ್ ಗಂಡ.

ಎಸ್.ಸಿ. ರಮೇಶ್, ಮೈಸೂರು
ವಿಜ್ಞಾನಿಗಳು, ವೈದ್ಯರು ತಮ್ಮ ಕಾರ್ಯಕ್ಕೂ ಮುನ್ನ ದೇವರ ದರ್ಶನ ಮಾಡುವುದೇಕೆ?



ಇದು ವೀಕ್ ಆದಾಗ ಟಾನಿಕ್ ಸೇವಿಸುವಂತೆಯೇ. ದೇವ ಅಧೀರತೆ ನಿವಾರಕ ಟಾನಿಕ್.

ಕೆ.ವಿ. ಪ್ರಮೀಳ, ಬೆಂಗಳೂರು
ನಿಲಯಕ್ಕೂ, ಆಲಯಕ್ಕೂ ಏನಾದರೂ ಸಂಬಂಧವಿದೆಯೆ?
ಎರಡೂ ಕಡೆ ಪ್ರಸಾದವೇ ಪ್ರಧಾನವು.

ಸಿ.ಕೆ. ಗಣಪ್ಪನವರ, ಮುಂಡರಗಿ
ಜನರು ಸಾಮಾನ್ಯವಾಗಿ ದೆವ್ವಕ್ಕೆ ಹೆಚ್ಚು ಹೆದರುವರೋ, ದೇವರಿಗೋ?
ದೇವರಿಗೇ. ದೆವ್ವಕ್ಕೆ ಪೊರಕೆ, ಚಪ್ಪಲಿ ತೋರಿಸುತ್ತಾರೆ. ದೇವರಿಗೆ ಕೋಳಿಬಲಿ ಕೊಡುತ್ತಾರೆ.

ಭಾರತೀ ಗಂಗಾಧರ್, ಬೆಂಗಳೂರು
ನರನಿಗೆ 2 ವರ್ಷಕ್ಕೆ ಮಾತು ಬಂದರೂ ಬದುಕಿಡೀ ಹೇಗೆ ಮಾತಾಡಬೇಕೆಂದು ಕಲಿಯುತ್ತಲೇ ಇರುತ್ತಾನಲ್ಲ?
ನಾಲಿಗೆ ಒದ್ದೆಜಾಗದಲ್ಲಿರುವುದರಿಂದ ಜಾರಿ ಜಾರಿ ಆಗಾಗ್ಗೆ ಮಾತನ್ನು ನೇರಗೊಳಿಸಿಕೊಳ್ಳಬೇಕಾಗುತ್ತಂತೆ.

ಅನಸೂಯ ಟಿ, ಕೇದಿಗೆಮನೆ
ಸಾಧಕರನ್ನು ನೋಡಿದಾಗ ಕೀಳರಿಮೆ ಕಾಡಲು ಕಾರಣ?
ಹೋಲಿಸಿಕೊಳ್ಳುವ ಅಪರಾಧವೇ ಇದಕ್ಕೆ ಕಾರಣ. ನಿಸ್ವಾರ್ಥ ಮೆಚ್ಚುಗೆಯೇ ಪರಿಹಾರ.

ಬಿ.ಆರ್. ಉಷಾ, ಕೆನಡಾ
ಕೃಷ್ಣನ ಭಕ್ತ ಕನಕ. ಗಣೇಶನ ಭಕ್ತ?
ನಿವಾರಿತ ಕಂಟಕ, ಸಮ್ಮೋದಕ.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು
ನವ ಕವಿಗಳು ಚಂದ್ರನ ಮೇಲೆ ಹೇಗೆ ಕವಿತೆ ಬರೆಯಬಹುದು?
ಭೂಮಿಯಿಂದ ಕಲ್ಲುಚೂರೊಂದನ್ನು ಕೊಂಡೊಯ್ದು ಚಂದ್ರನ ಬಂಡೆಯ ಮೇಲೆ ಕೆತ್ತಬಹುದು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಹೆಣ್ಣು ಕಲಿತರೆ ಶಾಲೆಯೊಂದು ತೆರೆದಂತೆ. ಗಂಡು ಕಲಿತರೆ?
ಹೆಣ್ಣಿಗಿರದು ಮಕ್ಕಳ ಹೋಂವರ್ಕ್ ಚಿಂತೆ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ
ಅಪ್ಪಟ ಹಳ್ಳಿಗಳಲ್ಲಿ ಸುರಿಯದ ಮಳೆ ಪ್ಯೂರ್ ಪಟ್ಟಣವಾದ ಬೆಂಗಳೂರಲ್ಲೇ ಹೆಚ್ಚು ಸುರಿಯುವುದೇಕೆ?
ಮಳೆರಾಯನಿಗೂ ನಗರಸಂಚಾರದ ಉಮೇದಂತೆ.

ಅರುಣ್ ಕುಲಕರ್ಣಿ, ನರೇಗಲ್ಲ
ಸರ್ಕಾರದ ಭಾಗ್ಯಗಳೆಲ್ಲವೂ ಹೆಂಗಸರಿಗೇ ಆದರೆ ಗಂಡಸರಿಗೆ ದೊರೆತ ಭಾಗ್ಯವೇನು?
ಹೆಂಗಸರು ಸ್ವ ಇಚ್ಛೆಯಿಂದ ಹೊರಹೋಗಿ ಗಂಡಸರಿಗೆ ಆಗಾಗ್ಗೆ ಸ್ವಗೃಹದಲ್ಲಿ ಪಾರ್ಟಿ ಭಾಗ್ಯ!

## ಬಹುಮಾನಿತ ಪ್ರಶ್ನೆ

ಮಂಡಿ ಕುಮಾರ್, ಬೆಂಗಳೂರು
ಉದ್ದಿನ ವಡೆಗೆ ತೂತು ಬರಲು ಕಾರಣವೇನು?
ಹೆಚ್ಚು ತಿಂದರೆ ನಮ್ಮ ಹೊಟ್ಟೆಯೂ ಅದೇ ವರ್ತುಲವನ್ನು ಹೋಲುವುದೆಂದು ಸೂಚಿಸಲು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಕವಿತೆ ಪ್ರಚಾರಕ್ಕೆ ಬರುವುದು ಹಾಡುಗಾರಿಕೆಯಿಂದಲೋ, ಒಳ ಹೂರಣದಿಂದಲೋ?
ಹೂರಣಕ್ಕೆ ತಕ್ಕ ರಾಗಕಣಕವನ್ನು ಒದಗಿಸಿ ಕಂಠಕಾವಲಿಯಲ್ಲಿ ಪಕ್ವವಾಗಿಸುವುದರಿಂದ.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ
ಎಂದಾದರೂ ನಿಮ್ಮ ಐಕ್ಯೂ ಪರೀಕ್ಷಿಸಿದ್ದೀರಾ?
ಓ! ದರ್ಶಿನಿಯಲ್ಲಿ ನನ್ನ ಐಕ್ಯೂ ಮೂರು. (ಇಡ್ಲಿ ಕ್ವಾಂಟಿಟಿ).

ರಮೇಶ್ ಬೊಂಗಾಳೆ, ಬೈಲಹೊಂಗಲ
ಮಹಿಳೆಯ ಜಡೆ ಹಾವಿನಂತಿರಲು ಕಾರಣವೇನು?



ಪುರುಷರ ಮುಳ್ಳುಹಂದಿ ದಾಡಿಮೀಸೆಗೆ ಸವಾಲಾಗಲು!

ಕಾಳೀಹುಂಡಿ ಶಿವಕುಮಾರ್, ಮೈಸೂರು
ಚಂದ್ರಲೋಕದಲ್ಲಿ ಈಗ ಭಾರತದ ವಿಕ್ರಮ ಶಕೆ ಆರಂಭವಾಗಿದೆ. ಮುಂದೆ?
ಇತರ ರಾಷ್ಟ್ರಗಳಿಗೆ ಭಾರತದ ವಿಕ್ರಮದ ಚಳಿ!

ಪಿ. ಚಿದಾನಂದ, ಜವನಗೊಂಡನಹಳ್ಳಿ
ಮದ್ಯಪಾನ, ಧೂಮಪಾನಗಳಿಂದ ಸಾವೆಂದು ತಿಳಿದೂ ಸರ್ಕಾರ ಅವುಗಳ ತಯಾರಿಕೆ ನಿಷೇಧಿಸಿಲ್ಲವಲ್ಲ?
ಇದು ಜನಸಂಖ್ಯಾ ನಿಯಂತ್ರಣದ ಪರೋಕ್ಷ ಕ್ರಮವಂತೆ.

■ ರಾಮ್